# ಕರ್ನಾಟಕ ವಿಧಾನ ಪರಿಷತ್ತು

**ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಎಂ.ಪಿ ಕುಶಾಲಪ್ಪ(ಸುಜಾ) ಇವರು ನಿಯಮ-330 ರ ಮೇರೆಗೆ ಮಂಡಿಸಿರುವ ಗಮನ ಸಳೆಯುವ ಸೂಚನೆಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಉತ್ತರ.**

**ವಿಷಯ:** ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಯನ್ನು ಉನ್ನತಿಕರಿಸಿ ರಾಜ್ಯ ವೃಂದವನ್ನಾಗಿ ದಿನಾಂಕ 13-03-2024 ರ ಅಧಿಸೂಚನೆ ಪ್ರಕಾರ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬಂದಿರುತ್ತದೆ. ಆದರೆ, ದಿನಾಂಕ 29-03-2023ರ ಇಲಾಖೆಯ ಕಾರ್ಯಕಾರಿ ಆದೇಶ ಬಗ್ಗೆ ಕರ್ನಾಟಕ ರಾಜ್ಯ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ:3349/2023 ಶ್ರೀಮತಿ ವೀಣಾ ಟಿ.ವಿ. vs ಕರ್ನಾಟಕ ರಾಜ್ಯ ಪ್ರಕರಣದಲ್ಲಿ ನೀಡಿರುವ ತೀರ್ಪಿನ ವಿರುದ್ಧವಾಗಿ ಆಯುಕ್ತಾಲಯವು, ಅಂತರ ಜಿಲ್ಲಾ ವರ್ಗಾವಣೆಗಳನ್ನು ಮಾಡಿ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದದ ಬಡ್ತಿ ಕೋಟಾದಡಿ ಅರ್ಹ ಗ್ರೇಡ-1 ಕಾರ್ಯದರ್ಶಿಗಳಿಗೆ ಬಡ್ತಿಯಿಂದ ವಂಚಿತರನ್ನಾಗಿ ಮಾಡಲಾಗಿದೆ. 6 ಅಂಶಗಳ ಮಾಹಿತಿ ಹಾಗೂ ಪೂರಕ ದಾಖಲೆಗಳನ್ನು ನೀಡುವ ಬಗ್ಗೆ.

**ಉತ್ತರ:** ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ವರ್ಗಾವಣೆಗೆ ಸಂಬಂಧಿಸಿದ 6 ಅಂಶಗಳ ಈ ಕೆಳಕಂಡ ಮಾಹಿತಿಯನ್ನು ನೀಡಿದೆ.

| ಕ್ರ. ಸಂ. | ವಿಷಯ | ಉತ್ತರ |
|---|---|---|
| 1. | ದಿನಾಂಕ: 03-07-2023 ರಿಂದ 12-03-2024ರ ವರೆಗೆ ಕೆ.ಎ.ಟಿ ಅರ್ಜಿ ಸಂಖ್ಯೆ 3349/2023ರ ಆದೇಶದ ವಿರುದ್ಧವಾಗಿ ನೇರ ಹಾಗೂ ಬಡ್ತಿ ಕೋಟಾದಲ್ಲಿನ ಖಾಲಿ ಹುದ್ದೆಗಳಲ್ಲಿ ಅಂತರ ಜಿಲ್ಲಾ ವರ್ಗಾವಣೆ ಮಾಡಿದ ಸಂಖ್ಯೆ ಮತ್ತು ವರ್ಗಾವಣೆ ಹೊಂದಿದ ನೌಕರರ ಹೆಸರು ಹಾಗೂ ಈ ಆದೇಶಗಳಿಗೆ ಮಂಡಿಸಿರುವ ಟಿಪ್ಪಣಿ ಪ್ರತಿ ನೀಡುವುದು. | ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದವನ್ನು ರಾಜ್ಯ ವೃಂದವನ್ನಾಗಿ ದಿನಾಂಕ:29-03-2023 ರಂದು ಪರಿವರ್ತಿಸಿದ ಪ್ರಯುಕ್ತ ರಾಜ್ಯಾವಾರು ಲಭ್ಯವಿರುವ ಖಾಲಿ ಹುದ್ದೆಗಳ ಎದುರು ಯಾವುದೇ ಪಂಚಾಯತಿ ಅಭಿವೃದ್ಧಿ ಅಧಿಕಾರಿಯನ್ನು ವರ್ಗಾವಣೆ ಮಾಡಲು ಅವಕಾಶವಿದೆ. ಲಭ್ಯವಿರುವ ಹುದ್ದೆಗಳನ್ನು ವರ್ಗಾವಣೆಗಾಗಿ ನೇರ ನೇಮಕಾತಿ/ಮುಂಬಡ್ತಿ ಹುದ್ದೆಗಳೆಂದು ವರ್ಗೀಕರಿಸಿರುವುದಿಲ್ಲ.<br><br>ನೇರ ನೇಮಕಾತಿ ಸಂದರ್ಭದಲ್ಲಿ ಮಾತ್ರ ಮೀಸಲಿಟ್ಟ ಒಟ್ಟು ಹುದ್ದೆಗಳನ್ನು ಪರಿಗಣಿಸಿ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗುವುದು. ಆದರೆ ವರ್ಗಾವಣೆಗೆ ಈ ರೀತಿ ಹುದ್ದೆಗಳನ್ನು ವಿಂಗಡಿಸಲು ಅವಕಾಶವಿರುವುದಿಲ್ಲ. |
| 2. | ದಿನಾಂಕ:13-03-2024ರಂದು ಈ ಪಿ.ಡಿ.ಓ ಹುದ್ದೆ ರಾಜ್ಯ ವೃಂದವಾಗಿ ಮಾರ್ಪಾಟುಗೊಳ್ಳದಿದರೆ, ದಿನಾಂಕ: 28-02-2025 ರಲ್ಲಿದ್ದಂತೆ, ಜಿಲ್ಲಾವಾರು ಈ ವೃಂದದ ನೇರ ಹಾಗೂ ಬಡ್ತಿ ಕೋಟಾದಲ್ಲಿ ಎಷ್ಟು ರಿಕ್ತಸ್ಥಾನಗಳಿರುತ್ತಿದ್ದವು. | ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಯನ್ನು ದಿನಾಂಕ:29-03-2023 ರಂದು ರಾಜ್ಯ ವೃಂದವನ್ನಾಗಿ ಮಾರ್ಪಾಟು ಮಾಡಲಾಗಿರುವುದರಿಂದ ಪ್ರಸ್ತುತ ಎಲ್ಲಾ ಜಿಲ್ಲೆಗಳಲ್ಲಿ ಲಭ್ಯವಿರುವ ಹುದ್ದೆಗಳು ಒಟ್ಟಾರೆ ರಾಜ್ಯ ವೃಂದ ಬಲ ಎಂದು ಪರಿಗಣಿಸಲಾಗುತ್ತಿದೆ. ಹಾಗಾಗಿ ಈ ಹಂತದಲ್ಲಿ ಜಿಲ್ಲಾವಾರು ಹುದ್ದೆಗಳ ಲೆಕ್ಕಾಚಾರ ಮತ್ತು ಹುದ್ದೆಗಳನ್ನು ಜಿಲ್ಲಾವಾರು ನೇರ ನೇಮಕಾತಿ ಹಾಗೂ ಬಡ್ತಿ ಕೋಟಾದಡಿ ವಿಂಗಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. |

| | | |
|---|---|---|
| 3. | ಸರ್ಕಾರವು ದಿನಾಂಕ:01-10-2024 ರಂದು ಪ್ರಕಟಿಸಿರುವ ಗ್ರೇಡ್-1 ಕಾರ್ಯದರ್ಶಿಗಳ ರಾಜ್ಯ ಮಟ್ಟದ ಕರಡು ಜೇಷ್ಠತಾ ಪಟ್ಟಿಗೆ ಬಂದಂತಹ ಆಕ್ಷೇಪಣೆಗಳಾವವು, ಈ ಆಕ್ಷೇಪಣೆಗಳಿಗೆ ಸರ್ಕಾರದ ಉತ್ತರಗಳೇನು? (ಆಕ್ಷೇಪಣೆವಾರು ಸರ್ಕಾರದ ಉತ್ತರಗಳ ಪ್ರತಿ ನೀಡಿ). | ದಿನಾಂಕ:01-10-2024 ರಂದು ಪಂಚಾಯತ್ ರಾಜ್ ಆಯುಕ್ತಾಲಯದಿಂದ ಪ್ರಕಟಿಸಲಾದ ರಾಜ್ಯ ಮಟ್ಟದ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ (ಗ್ರೇಡ್-1) ಜ್ಯೇಷ್ಠತಾ ಪಟ್ಟಿಗೆ ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿರುತ್ತದೆ. ರಾಜ್ಯ ಮಟ್ಟದ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ (ಗ್ರೇಡ್-1) ಜ್ಯೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸದಿರುವುದರಿಂದ ಸ್ವೀಕೃತ ಆಕ್ಷೇಪಣೆಗಳಿಗೆ ಉತ್ತರಗಳನ್ನು ನೀಡಿರುವುದಿಲ್ಲ. |
| 4. | ಸದರಿ ರಾಜ್ಯ ಮಟ್ಟದ ಕರಡು ಜೇಷ್ಠತಾ ಪಟ್ಟಿ ಅಂತಿಮಗೊಳಿಸಲು ಸರ್ಕಾರದ ಮುಂದಿರುವ ಅಡೆತಡೆಗಳೇನು ಹಾಗೂ ಜೇಷ್ಠತಾ ಪಟ್ಟಿಯಲ್ಲಿನ ಆಕ್ಷೇಪಣೆಗಳನ್ನು ಅಂತಿಮಗೊಳಿಸದೇ, ಎಲ್ಲಾ ಜಿಲ್ಲಾ ಪಂಚಾಯತಿಗೆ ದಿನಾಂಕ:31-12-2024 ರ ಪತ್ರದ ಪ್ರಕಾರ ಮತ್ತೆ ಜಿಲ್ಲಾ ಮಟ್ಟದ ಗ್ರೇಡ್-1 ಕಾರ್ಯದರ್ಶಿಗಳ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ಸೂಚಿಸಲು ಕಾರಣವೇನು? | ರಾಜ್ಯ ಮಟ್ಟದ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳ (ಗ್ರೇಡ್-1) ಜ್ಯೇಷ್ಠತಾ ಪಟ್ಟಿಗೆ ಸ್ವೀಕೃತವಾದ ಆಕ್ಷೇಪಣೆಗಳಲ್ಲಿನ ವಿವರಗಳಿಗೂ ಹಾಗೂ ಜಿಲ್ಲಾ ಮಟ್ಟದ ಅಂತಿಮ ಜ್ಯೇಷ್ಠತಾ ಪಟ್ಟಿಯಲ್ಲಿನ ವಿವರಗಳಿಗೂ ವ್ಯತ್ಯಾಸಗಳು ಕಂಡು ಬಂದಿರುತ್ತವೆ.<br><br>ರಾಜ್ಯ ಮಟ್ಟದ ಜ್ಯೇಷ್ಠತಾ ಪಟ್ಟಿಯನ್ನು ಜಿಲ್ಲಾ ಪಂಚಾಯತಿಗಳು ಅಂತಿಮಗೊಳಿಸಿದ ಜ್ಯೇಷ್ಠತಾ ಪಟ್ಟಿಯ ಆಧಾರದ ಮೇಲೆ ತಯಾರಿಸಲಾಗುವುದರಿಂದ, ಅಂತಹ ಆಕ್ಷೇಪಣೆಗಳನ್ನು ಮೊದಲಿಗೆ ಜಿಲ್ಲಾ ಮಟ್ಟದ ಜ್ಯೇಷ್ಠತಾ ಪಟ್ಟಿಗಳಲ್ಲಿ ಪರಿಶೀಲಿಸಿ, ಸರಿಪಡಿಸುವ ಅಗತ್ಯವಿರುತ್ತದೆ.<br><br>ಈ ಕಾರಣಗಳಿಂದ ಮತ್ತು ಕರ್ನಾಟಕ ದಿನಾಂಕ: 31-12-2023ರ ಅಂತ್ಯದವರೆಗಿನ (ಒಂದು ವರ್ಷದ ಹಿಂದಿನ) ಜ್ಯೇಷ್ಠತಾ ಪಟ್ಟಿಯನುಸಾರ ಬಡ್ತಿ ಪ್ರಕ್ರಿಯೆಗಳನ್ನು ಕೈಗೊಳ್ಳಲು ನಿಯಮಾನುಸಾರ ಅವಕಾಶಗಳಿಲ್ಲದಿರುವುದರಿಂದ, ಸರ್ಕಾರಿ ನೌಕರರ (ಜ್ಯೇಷ್ಠತಾ) ನಿಯಮಗಳು, 1957ರ ನಿಯಮ, 10 ರನ್ವಯ ದಿನಾಂಕ:01-01-2025ರಲ್ಲಿದ್ದಂತೆ ಜಿಲ್ಲಾ ಮಟ್ಟದ ಜ್ಯೇಷ್ಠತಾ ಪಟ್ಟಿಗಳನ್ನು ಪ್ರಕಟಿಸಲು ಜಿಲ್ಲಾ ಪಂಚಾಯತಿಗಳಿಗೆ ಸೂಚನೆಯನ್ನು ನೀಡಲಾಗಿರುತ್ತದೆ. |
| 5. | ಕ.ಸ.ನೌ (ಜ್ಯೇಷ್ಠತಾ) ನಿಯಮಗಳು, 1957ರ ನಿಯಮ-10ರಡಿ ನೇಮಕಾತಿ ಪ್ರಾಧಿಕಾರವು ಸಿದ್ಧಪಡಿಸಬೇಕಾದ ಜೇಷ್ಠತಾ ಪಟ್ಟಿಯನ್ನು ತಾತ್ಕಾಲಿಕ ತಡೆಹಿಡಿಯುವಂತೆ ಸರ್ಕಾರವು ಸೂಚಿಸಲು ಕಾನೂನಿನಲ್ಲಿ ಅವಕಾವಿದೆಯೆ? | ನಿಯಮಗಳಲ್ಲಿ ಅವಕಾಶವಿರುವುದಿಲ್ಲ ಮತ್ತು ನೇಮಕಾತಿ ಪ್ರಾಧಿಕಾರದಿಂದ ಸಿದ್ಧಪಡಿಸಬೇಕಾದ ಜ್ಯೇಷ್ಠತಾ ಪಟ್ಟಿಯನ್ನು ತಾತ್ಕಾಲಿಕವಾಗಿ ತಡೆ ಹಿಡಿಯುವ ಬಗ್ಗೆ ಸರ್ಕಾರದಿಂದ ಯಾವುದೇ ನಿರ್ದೇಶನಗಳನ್ನು ನೀಡಿರುವುದಿಲ್ಲ. |

| | | |
|---|---|---|
| 6. | ದಿನಾಂಕ:31-12-2024ರ ಪತ್ರದ ಪ್ರಕಾರ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳು ಪ್ರಕಟಿಸಿದ ಗ್ರೇಡ್-1 ಕಾರ್ಯದರ್ಶಿಗಳ ಜೇಷ್ಠತಾ ಪಟ್ಟಿಗಳನ್ನು ಇಲ್ಲಿಯವರಗೆ ಅಂತಿಮಗೊಳಿಸದಿರಲು ಕಾರಣವೇನು? | ದಿನಾಂಕ:31-12-2024ರ ಪತ್ರದನ್ವಯ ಎಲ್ಲಾ ಜಿಲ್ಲಾ ಪಂಚಾಯತಿಗಳು ದಿನಾಂಕ:01-01-2025 ರಲ್ಲಿದ್ದಂತೆ ತಾತ್ಕಾಲಿಕ ಜ್ಯೇಷ್ಠತಾ ಪಟ್ಟಿಗಳನ್ನು ಹೊರಡಿಸಿರುತ್ತಾರೆ. ಸದರಿ ಜ್ಯೇಷ್ಠತಾ ಪಟ್ಟಿಗಳಿಗೆ ಸ್ವೀಕೃತವಾಗಿರುವ ಆಕ್ಷೇಪಣೆಗಳನ್ನು ಆಯಾ ಜಿಲ್ಲಾ ಪಂಚಾಯತಿಗಳಲ್ಲಿ ಪರಿಶೀಲಿಸಲಾಗುತ್ತಿದ್ದು, ಶೀಘ್ರದಲ್ಲಿ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಪ್ರಕಟಿಸಲು ಕ್ರಮ ವಹಿಸಲಾಗುತ್ತದೆ. |

ಸಂಖ್ಯೆ:RDPR 186 GPA 2025

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.